ಓ.ಎಸ್. 304/2017

ಪಿ.ಡಬ್ಲ್ಯೂ-1

ದಿನಾಂಕಃ 29-07-2022 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.

**ಪಾಟೀ ಸವಾಲು ಪ್ರತಿವಾದಿ ಪರ ಶ್ರೀ ಎಂ.ಆರ್.ಹೆಚ್. ವಕೀಲರಿಂದ**

ಈ ದಾವೆಯನ್ನು ಕಾಳಮ್ಮ, ಜಯಮ್ಮ, ಶಾರದಮ್ಮ ಹೂಡಿದ್ದೇವೆ. ಈ ದಾವೆಯನ್ನು 11 ಜನರ ವಿರುದ್ಧ ಹೂಡಿದ್ದೇವೆ. ಪ್ರತಿವಾದಿ ನಂ.1 ರಿಂದ 4 ರವರ ವಿರುದ್ಧ ಏನು ಪರಿಹಾರ ಕೋರಿ ದಾವೆ ಹೂಡಿದ್ದೀರಿ ಎಂದರೆ ಸಾಕ್ಷಿಯು ಸದರಿಯವರು ನಮ್ಮ ಸ.ನಂ ಜಮೀನನ್ನು ಒತ್ತುವರಿ ಮಾಡಲು ಪ್ರಯತ್ನ ಪಟ್ಟಿರುವುದರಿಂದ ಅವರ ವಿರುದ್ಧ ದಾವೆ ಹೂಡಿದ್ದೇವೆಂದು ನುಡಿಯುತ್ತಾರೆ. ದಾವಾ ಸ್ವತ್ತಿನ ಪೂರ್ವ ದಿಕ್ಕಿಗೆ ಪ್ರತಿವಾದಿ 1 ರಿಂದ 4 ರವರ ಜಮೀನು ಇರುತ್ತದೆ. 4 ನೇ ಪ್ರತಿವಾದಿರವರ ಜಮೀನಿನ ಸ.ನಂ. ನನಗೆ ಗೊತ್ತಿಲ್ಲ. ಸದರಿಯವರಿಗೆ ಎಷ್ಟು ಎಕರೆ ಜಮೀನು ಇರುತ್ತದೆಂದು ನನಗೆ ಗೊತ್ತಿಲ್ಲ. ಸದರಿಯವರ ಜಮೀನಿನ ಚೆಕ್ಕುಬಂಧಿ ಹೇಳಲು ಆಗುವುದಿಲ್ಲ. 3 ನೇ ಪ್ರತಿವಾದಿರವರ ಜಮೀನಿನ ಸ.ನಂ. ನನಗೆ ಗೊತ್ತಿಲ್ಲ. ಸದರಿಯವರಿಗೆ ಎಷ್ಟು ಎಕರೆ ಜಮೀನು ಇರುತ್ತದೆಂದು ನನಗೆ ಗೊತ್ತಿಲ್ಲ. ಸದರಿಯವರ ಜಮೀನಿನ ಚೆಕ್ಕುಬಂಧಿ ಹೇಳಲು ಆಗುವುದಿಲ್ಲ. 2 ನೇ ಪ್ರತಿವಾದಿರವರ ಜಮೀನಿನ ಸ.ನಂ. ನನಗೆ ಗೊತ್ತಿಲ್ಲ. ಸದರಿಯವರಿಗೆ ಎಷ್ಟು ಎಕರೆ ಜಮೀನು ಇರುತ್ತದೆಂದು ನನಗೆ ಗೊತ್ತಿಲ್ಲ. ಸದರಿಯವರ ಜಮೀನಿನ ಚೆಕ್ಕುಬಂಧಿ ಹೇಳಲು ಆಗುವುದಿಲ್ಲ. 1 ನೇ ಪ್ರತಿವಾದಿರವರ ಜಮೀನಿನ ಸ.ನಂ. ನನಗೆ ಗೊತ್ತಿಲ್ಲ. ಸದರಿಯವರಿಗೆ ಎಷ್ಟು ಎಕರೆ ಜಮೀನು ಇರುತ್ತದೆಂದು ನನಗೆ ಗೊತ್ತಿಲ್ಲ. ಸದರಿಯವರ ಜಮೀನಿನ ಚೆಕ್ಕುಬಂಧಿ ಹೇಳಲು ಆಗುವುದಿಲ್ಲ. ಪ್ರತಿವಾದಿ ನಂ.1 ರಿಂದ 4 ರವರು ಒತ್ತುವರಿ ಮಾಡಿರುತ್ತಾರೆಂದು ನಾನು ಹೇಳಿದ್ದು, ಯಾವ ತಿಂಗಳು, ದಿನಾಂಕ ಎಂದರೆ ಸಾಕ್ಷಿಯು ಸುಮಾರು 6-7 ತಿಂಗಳ ಹಿಂದೆ ಎಂದು ನುಡಿಯುತ್ತಾರೆ. ದಾವೆ ಹೂಡಲು ನಮ್ಮ ವಕೀಲರಿಗೆ ನಾನೇ ಮಾಹಿತಿ ನೀಡಿರುತ್ತೇನೆ. ಸದರಿ ಸಂದರ್ಭದಲ್ಲಿ ಪೂರ್ವ ದಿಕ್ಕಿನಿಂದ ಪ್ರತಿವಾದಿ 1 ರಿಂದ 4 ರವರು ಒತ್ತುವರಿ ಮಾಡಿರುತ್ತಾರೆಂದು

ಓ.ಎಸ್. 304/2017

ಪಿ.ಡಬ್ಲ್ಯೂ-1

ತಿಳಿಸಿರುತ್ತೇನೆ. ದಾವಾ ಸ್ವತ್ತಿನ ಚೆಕ್ಕುಬಂಧಿ ಪೂರ್ವಕ್ಕೆ ಕೆ.ಎಂ. ರಾಮೇಗೌಡ ರವರ ಜಮೀನು, ಪಶ್ಚಿಮಕ್ಕೆ ಹಳ್ಳ ಮತ್ತು ಸ.ನಂ.20 ರ ಜಮೀನು, ಉತ್ತರಕ್ಕೆ ಚೆಲುವನಾಯಕ ರವರ ಜಮೀನು ಮತ್ತು ದಕ್ಷಿಣಕ್ಕೆ ರಸ್ತೆ. ಸದರಿ ಸ.ನಂ.20 ಜಮೀನಿನ ಪೂರ್ವಕ್ಕೆ ಉಳಿದ ಸ.ನಂ.20 ಇರುತ್ತದೆಂದು ನುಡಿಯುತ್ತಾರೆ. ಸ.ನಂ.20 ರ ಪೂರ್ತಿ ವಿಸ್ತೀರ್ಣ 3 ಎಕರೆ ಇರುತ್ತದೆ. ಸದರಿ ಜಮೀನು ನಮ್ಮ ಪಿತ್ರಾರ್ಜಿತ ಆಸ್ತಿಯಾಗಿರುತ್ತದೆ. ಸದರಿ ಸ.ನಂ.20 ಜಮೀನಿನ ಪಶ್ಚಿಮಕ್ಕೆ ನೀರಿನ ಹಳ್ಳ, ಉತ್ತರಕ್ಕೆ ಚೆಲುವನಾಯಕ ರವರ ಜಮೀನು ಮತ್ತು ದಕ್ಷಿಣಕ್ಕೆ ರಸ್ತೆ ಇರುತ್ತದೆ.

ದಾವಾ ಆಸ್ತಿಯನ್ನು ಕಾಳಮ್ಮ, ಜಯಮ್ಮ, ಶಾರದಮ್ಮ ಇವರು ಸಾಗುವಳಿ ಮಾಡುತ್ತಿರುವುದನ್ನು ನೋಡಿದವರು ಸಾಕ್ಷಿದಾರರು ಇರುತ್ತಾರೆ. ಅವರೆಂದರೆ ಚೆಲುವನಾಯಕ ಬಿನ್ ಕರಿನಾಯಕ, ಕಣಗಾಲು ಗ್ರಾಮ. ಸದರಿಯವರು ನಮ್ಮ ಪಕ್ಕದ ಜಮೀನಿನವರು.

ಈ ಹಂತದಲ್ಲಿ ಮುಂದುವರೆದ ಪಾಟೀಸವಾಲಿಗೆ ಕಾಲಾವಕಾಶ ಕೋರಿದ್ದರಿಂದ ನೀಡಲಾಯಿತು.

ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.

**ಓ.ಹೇ.ಕೇ.ಸರಿ ಇದೆ.**

**ಅಪರ ಸಿವಿಲ್ ಮತ್ತು ಜೆ.ಎಂ.ಎಫ್.ಸಿ.**
**ನ್ಯಾಯಾಧೀಶರು, ಹುಣಸೂರು.**